# ಕಾನೂನು ಆತ್ಮವಿಶ್ವಾಸ ತುಂಬಲಿ

ಸಾಮಾಜಿಕ ಜಾಲತಾಣದಲ್ಲಿ 'ಟ್ರೋಲಿಂಗ್' ಎನ್ನುವುದು ನಟಿಯರು ಮಾತ್ರವಲ್ಲ, ಸಾಮಾನ್ಯ ಹೆಣ್ಣುಮಕ್ಕಳೂ ಅನುಭವಿಸುತ್ತಿರುವ ಸಂಗತಿ. 'ಸಾಫ್ಟ್ ಟಾರ್ಗೆಟ್ಸ್' ಎಂಬ ಭಾವನೆಯೇ ಇದರ ಹಿಂದಿರುವುದು ಎನ್ನುವುದು ನನ್ನ ಅನಿಸಿಕೆ.

ನಾವೇನಾದರೂ ಒಂದು ವಿಷಯವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡರೆ ಅದನ್ನು ಹೀಯಾಳಿಸುವುದು, ಅವಹೇಳನ ಮಾಡುವುದು, ಅಶ್ಲೀಲ ಕಮೆಂಟ್ ಮಾಡುವುದು, ಬೆದರಿಕೆ ಹಾಕುವುದು ಇವೆಲ್ಲವೂ ನಡೆಯುತ್ತದೆ. ಸೆಲೆಬ್ರಿಟಿಗಳು ಅಥವಾ ಕೆಲವು ಹೆಣ್ಣುಮಕ್ಕಳು ಏನೇ ಪೋಸ್ಟ್ ಮಾಡಿದರೂ, ಹಲವರು ಟ್ರೋಲಿಂಗ್ ಮಾಡುವುದು ತಮ್ಮ ಹಕ್ಕು ಎಂಬಂತೆ ಸಾಧಿಸುತ್ತಾರೆ. 'ಕ್ಯಾರೆಕ್ಟರ್ ಅಸಾಸಿನೇಟ್' ಮಾಡುವುದು ಕೂಡ ಒಂದು ಚಟದಂತೆ ಆಗಿದೆ.

ಕೆಲವರು ಇಂಥ ಪೋಸ್ಟ್‌ಗಳನ್ನು ನಿರ್ಲಕ್ಷ್ಯ ಮಾಡುತ್ತಾರೆ, ಬ್ಲಾಕ್ ಮಾಡುತ್ತಾರೆ. ಅಕೌಂಟ್ ಪ್ರೈವೇಟ್ ಮಾಡಿಕೊಳ್ಳುತ್ತಾರೆ. ಆದರೆ ಸೆಲೆಬ್ರಿಟಿಗಳಿಗೆ ಖಾತೆಗಳನ್ನು ಪ್ರೈವೇಟ್ ಮಾಡಲು ತೊಡಕಿರುತ್ತದೆ. ನಾವು ಜನರಿಗೆ ಸ್ಪಂದಿಸಬೇಕಾಗುತ್ತದೆ. ಈ ಅವಕಾಶವನ್ನೇ ಕೆಲವರು ದುರ್ಬಳಕೆ ಮಾಡಿಕೊಳ್ಳುತ್ತಾರೆ. ಕೆಲವು ಬಾರಿ ಇಂಥವನ್ನು ನಿರ್ಲಕ್ಷ್ಯ ಮಾಡಬಹುದು, ಆದರೆ ಮಿತಿ ಮೀರಿದಾಗ ಸ್ಫೋಟಗೊಳ್ಳಲೇಬೇಕಾಗುತ್ತದೆ.

ಇಲ್ಲಿ ಮುಖಗಳು ಕಾಣಿಸುವುದಿಲ್ಲ, ವ್ಯಕ್ತಿ ಯಾರು ಎಂದು ಗೊತ್ತಾಗುವುದಿಲ್ಲ. ಈ ಅನಾಮಧೇಯ ಎನ್ನುವ ಅಂಶವನ್ನು ಇಟ್ಟುಕೊಂಡು ತುಂಬಾ ಕೆಟ್ಟ ನಡೆಯಲ್ಲಿ ಹೋಗುತ್ತಿದ್ದಾರೆ. ಕಮೆಂಟ್‌ಗಳಲ್ಲಿ ಉಪಯೋಗಿಸುವ ಭಾಷೆಯಂತೂ ಕೆಳಮಟ್ಟದ್ದಾಗಿರುತ್ತದೆ.

ನನಗೂ ಇಂಥ ಅನುಭವಗಳು ಆಗಿವೆ. ಎಷ್ಟೋ ಸಮಯ ನಿರ್ಲಕ್ಷ್ಯ ಮಾಡಿರುತ್ತೇನೆ, ಆ ಕ್ಷಣಕ್ಕೆ ಅವರನ್ನು ನಾನು ಬ್ಲಾಕ್ ಮಾಡಿರಬಹುದು. ಆದರೆ ಜಾಗೃತ ಮನಸ್ಥಿತಿಯಲ್ಲಿ ಅದು ಉಳಿದುಕೊಳ್ಳುತ್ತದೆ. ಟ್ರಿಗ್ಗರ್ ಮಾಡುತ್ತಲೇ ಇರುತ್ತದೆ. ಆ ಕೆಟ್ಟ ಕಮೆಂಟ್‌ಗಳು ತಲೆಯಲ್ಲಿ ಓಡುತ್ತಲೇ ಇರುತ್ತವೆ. ಇದು ತುಂಬಾ ಡಿಸ್ಟರ್ಬ್ ಮಾಡುವ ಸಂಗತಿ.

ನನ್ನದು ಯೂಟ್ಯೂಬ್ ಚಾನಲ್ ಇದೆ. ವ್ಲಾಗ್ ಮಾಡುವಾಗಲೂ ಏನಾದರೂ ಕೆಟ್ಟ ಕಮೆಂಟ್ ಹಾಕುವವರು ಇದ್ದೇ ಇರುತ್ತಾರೆ. ಏನೋ ಚಿಕ್ಕ ತಪ್ಪಾದರೂ ಕೆಟ್ಟ ಕಮೆಂಟ್‌ಗಳನ್ನು ಹಾಕಿ ಖುಷಿಪಡುತ್ತಾರೆ. ಜೊತೆಗೆ, ಎಲ್ಲ ವಿಷಯಗಳಿಗೂ ಹೀರೊಯಿನ್‌ಗಳನ್ನು ಟ್ರೋಲ್ ಮಾಡುತ್ತಾರೆ. ನಾವು ಹಾಕುವ ಬಟ್ಟೆ ಆಗಿರಬಹುದು, ನಾವು ಮಾಡುತ್ತಿರುವ ಸಿನಿಮಾಗಳಾಗಿರಬಹುದು ಎಲ್ಲವೂ ಅವರಿಗೆ ಒಂದು ಅವಕಾಶವಾಗಿರುತ್ತದೆ. ರಜೆಯಲ್ಲಿ ಎಲ್ಲಿಗಾದರೂ ಹೋಗಿ ಅಲ್ಲಿನದು ಒಂದು ಫೋಟೊ ಹಾಕಿದರೆ ಅದಕ್ಕೂ ಒಂದು ಕೆಟ್ಟ ಕಮೆಂಟ್ ಬರೆಯುತ್ತಾರೆ. ಕಮೆಂಟ್ ಅಥವಾ ಟ್ರೋಲ್‌ಗೆ ಇಂಥ ವಿಷಯವೇ ಬೇಕೆಂದೇನೂ ಇಲ್ಲ, ಸುಮ್ಮನೆ ಒಂದು ಸೆಲ್ಫಿ ಹಾಕಿದರೆ ಅದಕ್ಕೂ ಒಂದು ನೆಗೆಟಿವ್ ಕಮೆಂಟ್ ಬರುತ್ತದೆ.




ಇದರ ಬಗ್ಗೆ ಒಂದು ಕಠಿಣ ಕ್ರಮ ತೆಗೆದುಕೊಳ್ಳಲೇಬೇಕಾದ ಅನಿವಾರ್ಯತೆ ನಮ್ಮ ಮುಂದಿದೆ. ಯಾವುದೋ ಖಾತೆಯಿಂದ ಮೆಸೇಜ್ ಬರುತ್ತಿದ್ದರೆ ಬ್ಲಾಕ್ ಮಾಡಬಹುದು ಅಥವಾ ರಿಪೋರ್ಟ್ ಮಾಡಬಹುದು. ಆದರೆ ಅದೇ ವ್ಯಕ್ತಿ ಬೇರೆ ಐಡಿ ಸೃಷ್ಟಿಸಿ ಮುಂದುವರೆಸಬಹುದು. ಇಂಥದ್ದೊಂದು ಸರಳ ಪ್ರಕ್ರಿಯೆ ಸಾಧ್ಯವಾಗಿರುವುದೇ ತಪ್ಪು.

ನಮ್ಮ ನಡೆಗೆ ನಾವು ಜವಾಬ್ದಾರರಾಗಿರುವುದಿಲ್ಲ ಎಂಬ ಧೈರ್ಯವೇ ಇದಕ್ಕೆಲ್ಲ ಕಾರಣ ಎಂದು ನನಗನ್ನಿಸುತ್ತದೆ. ಇದಕ್ಕೆ ಸೂಕ್ತ ಕಾನೂನು ತರಬೇಕು ಎನ್ನುವುದು ನನ್ನ ಅಭಿಪ್ರಾಯ. ಸಾಮಾಜಿಕ ಜಾಲತಾಣದಲ್ಲಿ ಖಾತೆ ತೆರೆಯಲು ನಿರ್ದಿಷ್ಟ ನಿಯಮಗಳು ಇರಬೇಕು. ಒಂದು ಬ್ಯಾಂಕ್‌ನಲ್ಲಿ ಖಾತೆ ತೆರೆಯಲು ಸಂಪೂರ್ಣ ಡಾಕ್ಯುಮೆಂಟ್‌ಗಳನ್ನು ಪಡೆಯುತ್ತಾರೆ, ಹಾಗೆಯೇ ಐಡೆಂಟಿಟಿ ಅಪ್ರೂವ್ ಮಾಡಿದ ಮೇಲೆಯೇ ಸಾಮಾಜಿಕ ಜಾಲತಾಣಗಳಲ್ಲಿ ಖಾತೆ ತೆರೆಯಲು ಅನುಕೂಲ ಮಾಡಿಕೊಡಬೇಕು. ಅಂಥದ್ದೇನಾದರೂ ಕ್ರಮ ಬರಲೇಬೇಕು. ಆಗ ಒಂದು ಹೊಣೆಗಾರಿಕೆ ಬರುತ್ತದೆ, ಭಯ ಇರುತ್ತದೆ, ನಾನು ಯಾರು ಎನ್ನುವುದು ಗೊತ್ತಾಗುತ್ತದೆ ಎಂಬ ಭಯಕ್ಕಾದರೂ ತಮ್ಮನ್ನು ತಾವು ನಿಯಂತ್ರಿಸಿಕೊಳ್ಳುತ್ತಾರೆ. ಏನೇ ಮಾಡಿದರೂ ಅದಕ್ಕೆ ಪರಿಣಾಮ ಇದ್ದೇ ಇದೆ ಎನ್ನುವ ಚುರುಕು ಮುಟ್ಟಿಸಬೇಕಿದೆ.

ಮುಂದೆ ಸಾಮಾಜಿಕ ಜಾಲತಾಣಗಳ ಬಳಕೆ ಇನ್ನೂ ಹೆಚ್ಚಾಗುವುದರಿಂದ ಗಿಡವಾಗಿರುವಾಗಲೇ ಬಗ್ಗಿಸಿದರೆ ಒಳ್ಳೆಯದು. ಇಲ್ಲವೆಂದರೆ ತುಂಬಾ ಕೆಟ್ಟ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಒಂದು ಕಠಿಣ ನೀತಿ ನಿಯಮ, ಕಾನೂನನ್ನು ತರಲೇಬೇಕಾಗಿದೆ. ಜೊತೆಗೆ, ಇಂಥ ಸಂದರ್ಭದಲ್ಲಿ ದೂರು ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತಾರೆ ಎಂಬ ನಂಬಿಕೆ ಸಾಮಾನ್ಯ ಹೆಣ್ಣುಮಕ್ಕಳಲ್ಲಿಯೂ ಬರಬೇಕು. ನಮಗೆ ಕಾನೂನು ಬೆಂಬಲ ಇದೆ ಎಂಬ ಆತ್ಮವಿಶ್ವಾಸ ದೊರೆಯಬೇಕು.

—ಮೇಘನಾ ರಾಜ್, ನಟಿ

